ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಅನುದಾನ ಇಲ್ಲಿಯವರೆಗೆ ಬಿಡುಗಡೆಯಾಗಿರುವುದಿಲ್ಲ. ಸಂತಪುರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದಕ್ಕಾಗಿ ಸರ್ವೆ ಸಂಖ್ಯೆ. 105 ರಲ್ಲಿ 2 ಎಕರೆ ಜಮೀನನ್ನು ಪಡೆಯುವುದಕ್ಕಾಗಿ ಜಿಲ್ಲಾಧಿಕಾರಿಗಳು ಬೀದರ್ ರವರಿಗೆ ಭೂಸ್ವಾದೀನಪಡಿಸಿಕೊಡುವಂತೆ ಪತ್ರ ಬರೆಯಲಾಗಿದೆ. ಭೂಸ್ವಾದೀನಪಡಿಸಿಕೊಳ್ಳುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಆ) ಸರ್ಕಾರದ ಅನುಮತಿಯಿಂದ ಸದರಿ ಜಮೀನನ್ನು ಭೂಸ್ವಾಧೀನ ಕಾರ್ಯ ಮುಗಿದು, ಜಮೀನು ಮಂಜೂರು ಆದ ತಕ್ಷಣ ಬಸ್ ನಿಲ್ದಾಣ ಕಾಮಗಾರಿ 2003-04 ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಇಲ್ಲಿಯವರೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಇದರಿಂದಾಗಿ ಹಿಂತಿರುಗಿಸುವ ಪ್ರಶ್ನೆ ಇರುವುದಿಲ್ಲ.

ಔರಾದ್ ನಗರದಲ್ಲಿ ವಸತಿ ಗೃಹ ನಿರ್ಮಾಣದ ಬಗ್ಗೆ

1335 (1968) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ನಗರದಲ್ಲಿ ಜೆ.ಎಂ.ಎಫ್.ಸಿ ಜ್ಯುಡಿಷಿಯಲ್ ಕ್ವಾರ್ಟರ್ಸ್‌ಗಳ ನಿರ್ಮಾಣಕ್ಕೆ 10 ವರ್ಷದ ಹಿಂದೆಯೇ ಟೆಂಡರ್ ಕರೆದಿದ್ದರೂ ಇದುವರೆವಿಗೂ ನಿರ್ಮಾಣ ಕಾರ್ಯ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ವಿಷಯದಲ್ಲಿ ಇದುವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಸದರಿ ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸುವುದು ಯಾವಾಗ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅ) ಬೀದರ್ ಜಿಲ್ಲೆಯ ಔರಾದ್ ನಗರದ ಜೆ.ಎಂ.ಎಫ್. ಸಿ. ನ್ಯಾಯಾಧೀಶರ ವಸತಿ ಗೃಹವನ್ನು ದಿನಾಂಕ: 12.2.1996ರಲ್ಲಿ ಕಟ್ಟಲು ಪ್ರಾರಂಭಿಸಲಾಯಿತು. ಸದರಿ ಕಾಮಗಾರಿಗೆ ಒಟ್ಟು ಅಂದಾಜು ವೆಚ್ಚ ರೂ. 21.50 ಲಕ್ಷಗಳು ಆಗಿದ್ದು, 2002 03ನೇ ಸಾಲಿನ ಆಯವ್ಯಯದಲ್ಲಿ ರೂ. 7 ಲಕ್ಷಗಳನ್ನು ಒದಗಿಸಿದೆ. ಲೋಕೋಪಯೋಗಿ ಇಲಾಖೆಯು ಫೆಬ್ರವರಿ 2003ರಲ್ಲಿ ನೀಡಿದ ವರದಿಯ ಪ್ರಕಾರ ಈ ಕಟ್ಟಡದ ಎರಡನೇ ಹಂತದ ಕಾಮಗಾರಿಯು ನಡೆಯುತ್ತಿದ್ದು ಅದು ಇಷ್ಟರಲ್ಲೇ ಮುಕ್ತಾಯಗೊಳ್ಳುವ ಹಂತದಲ್ಲಿದೆ.

ಆ) ಈ ಮೇಲಿನ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಈ ಕಾಮಗಾರಿಯು ಈಗಾಗಲೇ ಪ್ರಾರಂಭಿಸಿದ್ದು ಅದನ್ನು ಇಷ್ಟರಲ್ಲೇ ಮುಗಿಸಲಾಗುವುದು.

ಔರಾದ ತಾಲ್ಲೂಕಿನಲ್ಲಿ ಅಕ್ರಮ ಸಾರಾಯಿ ಮಾರಾಟ

1337 (1970) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಸಾರಾಯಿ ಅಂಗಡಿಗಳಿಗೆ ನೀಡಿರುವ ಪರವಾನಿಗೆಗಳೆಷ್ಟು?